Member's Representations

ಶ್ರೀ ಸಿದ್ದಯ್ಯ ಕಾಶೀಮಠ (ನಿರಹಟ್ಟಿ).—ಸ್ವಾಮಿ ಮೊನ್ನೆಯ ದಿವಸ ಮಾನ್ಯ ರೆವಿನ್ಯೂ ಮಂತ್ರಿಗಳು ಜೋಳವನ್ನು ಕೊಳ್ಳತಕ್ಕ ವಿಚಾರದಲ್ಲಿ ಈ ಜೋಳದ ರೇಟಿಯನ್ನು ಮುಂಗಾರು ಬೆಳೆ ಬೆಳೆಯುತಕ್ಕ ಪ್ರದೇಶಗಳಿಗೆ ಮುಂಗಾರು ಬೆಳೆಗೆ ಅನ್ವಯಿಸುವುದಿಲ್ಲ ಎಂಬುದಾಗಿ ಹೇಳಿದರು. ಆದರೆ ನಮ್ಮ ಧಾರವ್ಯಾಡಾ ಜಿಲ್ಲೆಯಲ್ಲಿ ಈಗಾಗಲೇ ತಹಶೀಲ್ದಾರರೂ ಮತ್ತು ಅಸಿಸ್ಟೆಂಟ್ ಕಮಿಷನರುಗಳೂ ಜೋಳದ ರೇಟಿಯನ್ನು ಎಲ್ಲರಿಂದಲೂ ವಸೂಲ್ಮಾಡುತ್ತಿದ್ದಾರೆ. ಆದುದರಿಂದ ಮಂತ್ರಿಗಳು ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಇದನ್ನು ಮುಂಗಾರು ಬೆಳೆಗೆ ಅನ್ವಯಿಸದಂತೆ ಒಂದು ತಿಳುವಳಿಕೆಯನ್ನು ಕಳುಹಿಸುತ್ತಾರೆಯೇ ಎಂಬುದನ್ನು ವಿಶೇಷವಾಗಿ ಪ್ರಶ್ನಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಶಾಖೆಯ ಮಂತ್ರಿಗಳು). – ಈಗಾಗಲೇ ಮುಂಗಾರು ಬೆಳೆ ಆಗಿ ಬಹಳ ದಿವಸಗಳಾಯಿತು. ಈಗ ಇರತಕ್ಕದೆಲ್ಲಾ ಹಿಂಗಾರು ಬೆಳೆಯೇ, ಅಂದರೆ ರಾಗಿ ಬೆಳೆ, ಆದರೆ ಸರ್ಕಾರಿ ಆಜ್ಞೆ ಇರತಕ್ಕದ್ದು ಯಾರ ಬಳಿಯಲ್ಲೇ ಆಗಲೀ 20 ಕ್ವಿಂಟಾಲಿಗಿಂತ ಹೆಚ್ಚಿಗೆ ಇದ್ದರೂ ವಸೂಲ್ಮಾಡಬೇಕೆಂದು ತಿಳಿಸಲಾಗಿದೆ. ಆ ಆಜ್ಞೆಯಲ್ಲಿ ಹೀಗೆ ಹಿಂಗಾರು ಮುಂಗಾರು ಎಂಬ ಯಾವ ವ್ಯತ್ಯಾಸವನ್ನೂ ಮಾಡಿಲ್ಲ. ಈ ಆಜ್ಞೆಯಲ್ಲಿ ಎಲ್ಲವೂ ಕೊಡಬೇಕೆಂತ ಮಾಡಿಲ್ಲ. ಯಾರಲ್ಲಿ 20 ಕ್ವಿಂಟಾಲಿಗಿಂತ ಜಾಸ್ತಿ ಇರುತ್ತದೋ ಅಂಥವರಿಂದ ಮಾತ್ರ ವಸೂಲ್ಮಾಡಬೇಕು ಎಂತ ಹೇಳಿದೆ 20 ಕ್ವಿಂಟಾಲಿಗಿಂತ ಜಾಸ್ತಿ ಇರತಕ್ಕವರೆಲ್ಲರೂ ಕೊಡಲೇ ಬೇಕು.

ಶ್ರೀ ಬಿ. ಡಿ. ಜತ್ತಿ (ಹಣಕಾಸಿನ ಶಾಖೆಯ ಸಚಿವರು).—ಆ ನೋಟಿಫಿಕೇಷನ್ನಿನಲ್ಲಿ 5 ಎಕರೆಗಳಿಗೆ ಪೇಲ್ವಟ್ಟು ಜಮೀನಿರತಕ್ಕವರಿಂದ ವಸೂಲಾಡಬೇಕು ಎಂತ ಇದೆ. ಅದರಲ್ಲಿ ಮುಂಗಾರು ಹಿಂಗಾರು ಎಂಬ ಪದಗಳನ್ನು ಹಾಕಿಲ್ಲ. ಅಲ್ಲಿರತಕ್ಕದ್ದು ಒಂದನೇ ದರ್ಜೆ ಮತ್ತು ಎರಡನೇ ದರ್ಜೆ ಎಂತ ಪದಗಳನ್ನು ಹಾಕಿದೆ. ಸಾಮಾನ್ಯವಾಗಿ ಮುಂಗಾರು ಜೋಳ ಕೆಂಪಾಗಿರುತ್ತೆ, ಆದರೆ ಈಗ ಮುಂಗಾರಿನಲ್ಲೂ ಬಿಳಿಯ ಜೋಳ ಬಂದಿದೆ. ಆದರಿಂದ ಅದರಲ್ಲಿ ಹಾಕಿರತಕ್ಕದ್ದು ಒಂದನೇ ದರ್ಜೆಯ ಜೋಳ ಮತ್ತು ಎರಡನೇ ದರ್ಜೆಯ ಜೋಳ ಎಂತ ಮಾತ್ರ.

ಶ್ರೀ ಎಂ. ವಿ. ಕೃಷ್ಣಪ್ಪ.—20 ಕ್ವಿಂಟಾಲುಗಳಿಗಿಂತ ಜಾಸ್ತಿ ಇರತಕ್ಕವರೆಲ್ಲರೂ ಕೊಡಲೇ ಬೇಕು (ಕೆಲವು ಸದಸ್ಯರುಗಳು ತಮ್ಮ ಸ್ಥಾನದಿಂದ ಎದ್ದೆದ್ದು ನಿಲ್ಲುತ್ತಿದ್ದರು).

Mr. SPEAKER.—It was represented to me that something is being done contrary to the statement made on the Floor of the House. I attempted to contact the Hon'ble Minister yesterday. It was not possible. Today he asked me whether there is going to be a Debate. The members must contact the Minister and speak about these things. Why should they make the floor a means of discussing things which are not on the agenda.

Sri N. O. SAMAJI (Belgaum II).—[Marathi]

ಶ್ರೀ ಎಂ. ವಿ. ಕೃಷ್ಣಪ್ಪ.—ತಮಿಳಿನಲ್ಲಿ ಉತ್ತರ ಕೊಟ್ಟರು.

(Laughter.)

ಶ್ರೀಮತಿ ಸುಶೀಲಾಬಾಯಿ ಶಹಾ (ಬಾಗೇವಾಡಿ).—ಬಿತ್ತರ ಜಿಲ್ಲೆಗೆ ಜೇರೆ ಜಿಲ್ಲೆಗಳಿಂದ ಜೋಳ ಕಳುಹಿಸುವುದಕ್ಕೆ ಪರವಾನಗಿ ಇಲ್ಲ. ಆದ್ದರಿಂದ ರೈತರಿಗೆ ಬಹಳ ಕಷ್ಟವಾಗಿದೆ ಎಂಬ ಮಾತು ನಿಜವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಂಥಾದ್ದೇನೂ ಇಲ್ಲ. ಜೋಳಕ್ಕೆ ಪ್ರೊಕ್ಯೂರ್‌ಮೆಂಟ್ ಆರ್ಡರ್ ಆಗಿ 15 ದಿವಸ ಆಯಿತು. ಡಿಸ್ಟ್ರಿಕ್ಟ್‌ದಿಂದ ಡಿಸ್ಟ್ರಿಕ್ಟ್‌ಗೆ ಮೂವ್‌ಮೆಂಟ್ ಬ್ಯಾನ್ ಆಗಿದೆ, ನಪ್ಲಸ್ ಡಿಸ್ಟ್ರಿಕ್ಟ್‌ನಿಂದ ಅಲ್ಲಿಗೆ ಹೋಗಬೇಕಾಗಿತ್ತು ಅದನ್ನು ತಿಂಗಳ ಕೋಟಾ ಎಷ್ಟು ಕಳುಹಿಸಿಕೊಡಬೇಕೋ ಅಷ್ಟನ್ನು ಕಳುಹಿಸಿಕೊಡುತ್ತಾರೆ.